**ಸಾಕ್ಷಿಗೆ ದಿನಾಂಕಃ28-06-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು ::1 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ. ATJ ವಕೀಲರಿಂದ ::**

ನಾನು ಪ್ರಸ್ತುತದಲ್ಲಿ ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನಾವುಗಳು ಒಟ್ಟು 3 ಜನ ಅಣ್ಣತಮ್ಮ ಂದಿರು ಎಂದರೆ ಸರಿ. ನನ್ನ ತಮ್ಮ ಮೃತ್ಯುಂಜಯ್ಯ ರವರು ಸಹ ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ಬೆಂಗಳೂರಿನ ಒಂದು ಖಾಸಗಿ ಸಂಸ್ದೆಯಲ್ಲಿ supervisor ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನನ್ನ ತಮ್ಮ ಮೃತ್ಯುಂಜಯ್ಯ ರವರು ಯಾವ ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ತಮ್ಮ ಮೃತ್ಯುಂಜಯ್ಯ ರವರು diploma ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ಮತ್ತೊಬ್ಬ ತಮ್ಮ ಕಾಂತರಾಜ್ ರವರು SSLC ವರೆಗೂ ವಿದ್ಯಾಭ್ಯಾಸ ಮಾಡಿರುತ್ತಾರೆ. ನಾನು ITI ವರೆಗೂವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹಾಗೂ ಮೃತ್ಯುಂಜಯ್ಯ ರವರು ಕಾಲೇಜು ವಿದ್ಯಾಭ್ಯಾಸ ಮಾಡಿರುತ್ತೇವೆ ಆದರೆ ಕಾಂತರಾಜು ರವರು ಕಾಲೇಜ್ ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಾಂತರಾಜು ರವರು SSLC ನಂತರ ನಮ್ಮ ಆಸ್ತಿಗಳ ನಿರ್ವಹಣೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಅವರು SSLC ನಂತರ ನಮ್ಮ ತಂದೆಗೆ ಸಹಾಯ ಮಾಡಿಕೊಂಡಿದ್ದರು ಎಂದರೆ ಸರಿ. ನನ್ನ ವಿದ್ಯಾಭ್ಯಾಸಕ್ಕೆ ನನ್ನ ತಂದೆಯವರೇ ಆರ್ಥಿಕ ಸಹಾಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಕೇವಲ ಐಟಿಐ ವಿದ್ಯಾಭ್ಯಾಸ ಮಾಡಲು ನನ್ನ ತಂದೆಯವರೇ ಆರ್ಥಿಕ ಸಹಾಯ ಮಾಡಿರುತ್ತಾರೆ, ಉಳಿದ ವಿದ್ಯಾಭ್ಯಾಸ ನನ್ನ ಅಜ್ಜಿ ಆರ್ಥಿಕ ಸಹಾಯ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯ ಮನೆ ಚಿಕ್ಕಬಳ್ಳೆಕೆರೆಯಲ್ಲಿ ಇದ್ದು ನನ್ನ ಶಾಲಾ ವಿದ್ಯಾಭ್ಯಾಸವನ್ನು ಚಿಕ್ಕಬಳ್ಳೆಕೆರೆಯಲ್ಲಿ ಹಾಗೂ ಕಲ್ಕೆರೆ ಗ್ರಾಮದಲ್ಲಿ ಮಾಡಿರುತ್ತೇನೆ. ನಂತರ ಐಟಿಐ ವಿದ್ಯಾಭ್ಯಾಸವನ್ನು ಹೊಸದುರ್ಗದಲ್ಲಿ ಮಾಡಿದ್ದು ಆ ಸಮಯದಲ್ಲಿ ನಾನು ನನ್ನ ತಂದೆ ಮನೆಯಲ್ಲಿ ವಾಸಮಾಡಿಕೊಂಡಿದ್ದೆ. ಐಟಿಐ ವಿದ್ಯಾಭ್ಯಾಸ ನಂತರ ನಾನು ಕೆಲಸಕ್ಕೆ ಬೆಂಗಳೂರಿಗೆ ಹೋಗಿರುತ್ತೇನೆ ಎಂದರೆ ಸರಿ. ನನ್ನ ತಮ್ಮ

ಮೃತ್ಯುಂಜಯ ರವರು sslc ವಿದ್ಯಾಭ್ಯಾಸವನ್ನು ಕೆ ಜಿ ಎಫ್ ನಲ್ಲಿ ಇರುವ ನಮ್ಮ ಮಾವನ ಮನೆಯಲ್ಲಿ ವಾಸ ಮಾಡಿಕೊಂಡು ಮಾಡಿರುತ್ತಾರೆ. diploma ವಿದ್ಯಾಭ್ಯಾಸ ಹಾಸನದಲ್ಲಿ ಒಂದು ವಸತಿ ನಿಲಯದಲ್ಲಿ ಇದ್ದು ಮಾಡಿರುತ್ತಾರೆ. ಸದರಿಯವರ ವಿದ್ಯಾಭ್ಯಾಸಕ್ಕೆ ನನ್ನ ತಂದೆಯವರು ಆರ್ಥಿಕ ಸಹಾಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಹಾಗೂ ನಾನು ಇಬ್ಬರು ಸಹ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಇನ್ನೊಬ್ಬ ತಮ್ಮ ಕಾಂತರಾಜು ರವರಿಗೆ ನಾನು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಸ್ವತಃ ವಿದ್ಯಾಭ್ಯಾಸ ಮುಂದುವರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಕಾಂತರಾಜು ರವರು ಮನೆಯಲ್ಲಿ ಇದ್ದು ವ್ಯವಸಾಯವನ್ನು ಮಾಡಿಕೊಂಡಿದ್ದರು ಎಂದರೆ ಸರಿ. ಕಾಂತರಾಜು ರವರು ನನ್ನ ತಂದೆಯ ಜೊತೆ ಸೇರಿ ವ್ಯವಸಾಯ ಮಾಡುತ್ತಿದ್ದ ಸಮಯದಲ್ಲಿ ನಮ್ಮ ಗ್ರಾಮದ ಇತರೆಯವರ ಜಮೀನುಗಳಿಗೂ ಸಹ ಗುತ್ತಿಗೆ ಹೊಡೆಯುತ್ತಿದ್ದರು ಎಂದರೆ ಸರಿ. ಅದೇ ರೀತಿ ಬೇರೆಯವರ ಜಮೀನುಗಳಲ್ಲಿ ಕಾಂತರಾಜು ಹಾಗೂ ನನ್ನ ತಂದೆಯವರು ಕೂಲಿ ಕೆಲಸ ಸಹ ಮಾಡುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂಬರ್ 5 ಆಸ್ತಿಯು ಮೃತ್ಯುಂಜಯ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಸದರಿ ಆಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿದ್ದು ಅದಕ್ಕೆ ನಾನು ಸಹ ಆರ್ಥಿಕ ನೆರವು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮೃತ್ಯುಂಜಯ ರವರು ಬೆಂಗಳೂರಿನಲ್ಲಿ ಒಂದು ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮನೆಯಲ್ಲಿ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಈ ದಾವೆಯನ್ನು ಕೇವಲ ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗಳ ವಿದ್ಯಾಭ್ಯಾಸಕೋಸ್ಕರ ನಮ್ಮ ಕುಟುಂಬದ ಆಸ್ತಿಗಳಲ್ಲಿ ಒಂದು ಎಕರೆ ಜಮೀನು ಅಂದರೆ ದಾವಾ ಐಟಂ ನಂಬರ್ 3 ಜಮೀನು ಅನ್ನು ನನ್ನ ಹೆಸರಿಗೆ ಮಾಡಿಕೊಡಲು ನಾನು ನನ್ನ ತಂದೆಯವರ ಬಳಿ ಹಿಂದೆ ಕೇಳಿರುತ್ತೇನೆ ಎಂದರೆ ಸರಿ. ಆ ರೀತಿ ನಾನು 2020 ರಲ್ಲಿ ಕೇಳಿರುತ್ತೇನೆ. ಆಗ ನನ್ನ ತಂದೆಯವರು ನನ್ನ ಬೇಡಿಕೆಯನ್ನು ನಿರಾಕರಿಸಿರುತ್ತಾರೆ. ಆ ಸಮಯದಿಂದ ನಾನು ನಮ್ಮ ಮನೆಗೆ ಹೋಗುವುದನ್ನು ನಿಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ಒಂದು ಮನೆಯನ್ನು ಕಟ್ಟಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಮನೆಯನ್ನು ಸಹ ಈ ದಾವೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂಬರ್ 4 ಜಮೀನು ಅನ್ನು ಕಾಂತರಾಜು

ರವರು ಕ್ರಯಕ್ಕೆ ಕೊಂಡುಕೊಂಡಿರುತ್ತಾರೆ ಎಂದರೆ ಸರಿ. ಅದೇ ರೀತಿ ದಾವಾ ಐಟಂ ನಂಬರ್ 6 ಜಮೀನು ಅನ್ನು ಸಹ ಕಾಂತರಾಜು ರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು 2020 ನೇ ಸಾಲಿನವರೆಗೂ ಯಾವಾಗಲೂ ನಮ್ಮ ಮನೆಗೆ ಬಂದ ಹೋಗುತ್ತಿದ್ದೆ ಎಂದರೆ ಸಾಕ್ಷಿಯು ಕೇವಲ ಆಗಾಗ ಬಂದು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಹಿಂದೆ ಇದ್ದ ಮನೆಯು ಈಗ ಬಿದ್ದು ಹೋಗಿರುತ್ತದೆ ಎಂದರೆ ಸರಿ. ಆದಕಾರಣ ನನ್ನ ತಂದೆ ತಾಯಿಯವರು ಕಾಂತರಾಜು ರವರ ಮನೆಯಲ್ಲಿ ಪ್ರಸ್ತುತ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನಾಗಲೀ ಹಾಗೂ ಮೃತ್ಯುಂಜಯ ರವರು ನಮ್ಮ ಬಿದ್ದು ಹೋದ ಮನೆಯನ್ನು ರಿಪೇರಿ ಮಾಡಲು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ರಿಪೇರಿ ಮಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಇತರೇ ಸಹೋದರರ ಮಧ್ಯದಲ್ಲಿ ಹಿಂದೆ ಮೌಖಿಕವಾಗಿ ಕುಟುಂಬದ ಆಸ್ತಿಗಳ ಬಗ್ಗೆ ವಿಭಾಗದ ಮಾತುಕತೆ ಆಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಮಾತುಕತೆಯಲ್ಲಿ ನನಗೆ ಬರಬೇಕಾದ ಆಸ್ತಿ ನೀಡದ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿದಿರುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: